# ಕರ್ನಾಟಕ ವಿಧಾನ ಪರಿಷತ್ತು

| | | | |
|---|---|---|---|
| 01. | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1099 |
| 02. | ಮಾನ್ಯ ಸದಸ್ಯರ ಹೆಸರು | : | ಶ್ರೀ ಮಧು ಜಿ.ಮಾದೇಗೌಡ (ಪದವೀಧರರ ಕ್ಷೇತ್ರ) |
| 03. | ಉತ್ತರಿಸುವ ದಿನಾಂಕ | : | 22.02.2024 |
| 04. | ಉತ್ತರಿಸುವ ಸಚಿವರು. | : | ಗೃಹ ಸಚಿವರು. |

| ಕ್ರ.ಸ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಕಳೆದ 03 ವರ್ಷಗಳಲ್ಲಿ ನಡೆದ ಕೊಲೆ, ಸುಲಿಗೆ, ಮಹಿಳೆ ಮತ್ತು ಅಪ್ರಾಪ್ತ ಮಕ್ಕಳ ಅಪಹರಣ ಹಾಗೂ ಅತ್ಯಾಚಾರ ಪ್ರಕರಣಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು) | ರಾಜ್ಯದಲ್ಲಿ ಕಳೆದ 03 ವರ್ಷಗಳಲ್ಲಿ ದಾಖಲಾಗಿರುವ ಕೊಲೆ, ಸುಲಿಗೆ, ಮಹಿಳೆ ಮತ್ತು ಅಪ್ರಾಪ್ತ ಮಕ್ಕಳ ಅಪಹರಣ ಹಾಗೂ ಅತ್ಯಾಚಾರ ಪ್ರಕರಣಗಳ ಸಂಖ್ಯೆ ಈ ಕೆಳಕಂಡಂತಿರುತ್ತದೆ. |

| ಅಪರಾಧಗಳು | 2021 | 2022 | 2023 |
|---|---|---|---|
| **ಕೊಲೆ** | 1343 | 1370 | 1298 |
| **ಸುಲಿಗೆ** | 979 | 1069 | 1253 |
| **ಮಹಿಳೆಯರ ಕಾಣೆ ಪ್ರಕರಣಗಳು** | 10081 | 11214 | 13392 |
| **ಗಂಡು ಮಕ್ಕಳ ಕಾಣೆ/ಅಪಹರಣ** | 487 | 745 | 909 |
| **ಹೆಣ್ಣು ಮಕ್ಕಳ ಕಾಣೆ/ಅಪಹರಣ** | 1628 | 1831 | 2190 |
| **ಅತ್ಯಾಚಾರ** | 556 | 538 | 607 |
| **ಪೋಕ್ಸೋ** | 2880 | 3190 | 3805 |

ಜಿಲ್ಲಾವಾರು ಮಾಹಿತಿಯನ್ನು **ಅನುಬಂಧದಲ್ಲಿ** ಒದಗಿಸಿದೆ.

| ಕ್ರ.ಸ. | ಪ್ರಶ್ನೆ | ಉತ್ತರ |
|---|---|---|
| ಆ) | ಆ ಪೈಕಿ ಅಪರಾಧಿಗಳನ್ನು ಪತ್ತೆ ಹಚ್ಚಲಾದ ಪ್ರಕರಣಗಳ ಸಂಖ್ಯೆ ಎಷ್ಟು; ಈವರೆವಿಗೂ ಪತ್ತೆಯಾಗದ ಪ್ರಕರಣಗಳು, ಶಿಕ್ಷೆಗೆ ಒಳಪಟ್ಟ ಅಪರಾಧಗಳೆಷ್ಟು; (ವಿವರ ನೀಡುವುದು) | ಅಪರಾಧ ಪ್ರಕರಣಗಳ ಪೈಕಿ ಪತ್ತೆ ಹಚ್ಚಲಾಗಿರುವ, ಇತರೆ ವಿಲೇವಾರಿ, ಪತ್ತೆಯಾಗದ ಮತ್ತು ಶಿಕ್ಷೆಯ ಪ್ರಕರಣಗಳ ವಿವರಗಳು ಹಾಗೂ ಕಾಣೆ ಪ್ರಕರಣಗಳಲ್ಲಿ ಪತ್ತೆ ಹಚ್ಚಲಾಗಿರುವ ವಿವರಗಳು ಈ ಕೆಳಕಂಡಂತಿದೆ. |

| ಅಪರಾಧ ಶೀರ್ಷಿಕೆ | 2021 | | | |
|---|---|---|---|---|
| | **ಪತ್ತೆ** | **ಇತರೆವಿಲೇವಾರಿ** | **ಶಿಕ್ಷೆ** | **ಪತ್ತೆಯಾಗದ** |
| ಕೊಲೆ | 1135 | 98 | 27 | 65 |
| ಸುಲಿಗೆ | 737 | 56 | 5 | 174 |
| ಅತ್ಯಾಚಾರ | 474 | 74 | 2 | 18 |
| ಪೋಕ್ಸೋ | 2604 | 138 | 128 | 7 |

| ಅಪರಾಧ ಶೀರ್ಷಿಕೆ | 2022 | | | |
|---|---|---|---|---|
| | **ಪತ್ತೆ** | **ಇತರೆವಿಲೇವಾರಿ** | **ಶಿಕ್ಷೆ** | **ಪತ್ತೆಯಾಗದ** |
| ಕೊಲೆ | 1176 | 118 | 5 | 36 |
| ಸುಲಿಗೆ | 795 | 67 | 2 | 169 |
| ಅತ್ಯಾಚಾರ | 434 | 82 | 0 | 1 |
| ಪೋಕ್ಸೋ | 2930 | 170 | 73 | 10 |

| ಅಪರಾಧ ಶೀರ್ಷಿಕೆ | 2023 | | | |
|---|---|---|---|---|
| | ಪತ್ತೆ | ಇತರವಿಲೇವಾರಿ | ಶಿಕ್ಷೆ | ಪತ್ತೆಯಾಗದ |
| ಕೊಲೆ | 917 | 59 | 27 | 2 |
| ಸುಲಿಗೆ | 552 | 49 | 5 | 41 |
| ಅತ್ಯಾಚಾರ | 367 | 68 | 2 | 0 |
| ಪೋಕ್ಸೋ | 3020 | 208 | 128 | 8 |

| ಕಾಣೆ ಪ್ರಕರಣಗಳು | 2021 | 2022 | 2023 |
|---|---|---|---|
| | ಪತ್ತೆ | ಪತ್ತೆ | ಪತ್ತೆ |
| ಮಹಿಳೆಯರ ಕಾಣೆ ಪ್ರಕರಣಗಳು | 9808 | 10843 | 12360 |
| ಗಂಡು ಮಕ್ಕಳ ಕಾಣೆ/ಅಪಹರಣ | 461 | 706 | 741 |
| ಹೆಣ್ಣು ಮಕ್ಕಳ ಕಾಣೆ/ಅಪಹರಣ | 1573 | 1746 | 1704 |

ಇ) ಸರ್ಕಾರ ಮಹಿಳಾ ಮತ್ತು ಮಕ್ಕಳ ಸುರಕ್ಷತೆಗಾಗಿ ಕೈಗೊಂಡಿರುವ ಕ್ರಮಗಳೇನು;

**ಪೊಲೀಸ್ ಇಲಾಖೆಯ ವತಿಯಿಂದ ಮಹಿಳೆಯರ ಮತ್ತು ಮಕ್ಕಳ ಸುರಕ್ಷತೆಗಾಗಿ ಕೈಗೊಂಡಿರುವ ಮುಂಜಾಗೃತ ಹಾಗೂ ಸುಧಾರಿತ ಕ್ರಮಗಳು ಈ ಕೆಳಕಂಡಂತಿದೆ.**

- ಬೆಂಗಳೂರು ನಗರದಲ್ಲಿ ಮಹಿಳೆಯರ ರಕ್ಷಣೆಗಾಗಿ, ಮಹಿಳಾ ಸಹಾಯವಾಣಿ 1091, 22943225 ಕಾರ್ಯ ನಿರ್ವಹಿಸುತ್ತಿದ್ದು, ಸ್ಪಂದನ ಸಹಾಯವಾಣಿಯನ್ನು ಸ್ಥಾಪಿಸಿ ಕಾರ್ಯನಿರ್ವಹಿಸಲಾಗುತ್ತಿದೆ.
- ದಿನದ 24 ಗಂಟೆಯೂ ಸಹ ಮಹಿಳೆಯರ ಮತ್ತು ಮಕ್ಕಳ ಸುರಕ್ಷತೆಗಾಗಿ "ಪಿಂಕ್ ಹೊಯ್ಸಳ" ಮತ್ತು 112 ಗಸ್ತು ವಾಹನಗಳು ಗಸ್ತು ಕಾರ್ಯ ನಿರ್ವಹಿಸುತ್ತಿವೆ.
- ರಾಜ್ಯದ ಇತರೆ ಜಿಲ್ಲೆಗಳಾದ ಬಾಗಲಕೋಟೆ ಜಿಲ್ಲೆಯಲ್ಲಿ ಚನ್ನಮ್ಮ ಪಡೆ, ಬಳ್ಳಾರಿ ಜಿಲ್ಲೆಯಲ್ಲಿ ಓಬವ್ವ ಪಡೆ, ದಾವಣಗೆರೆ ಜಿಲ್ಲೆಯಲ್ಲಿ ದುರ್ಗಾ ಪಡೆ, ಗದಗ ಜಿಲ್ಲೆಯಲ್ಲಿ ಚನ್ನಮ್ಮ ಪಡೆ, ಉತ್ತರ ಕನ್ನಡ ಜಿಲ್ಲೆಯಲ್ಲಿ ಶರಾವತಿ ಓಬವ್ವ ಪಡೆ, ಬೀದರ್ ಜಿಲ್ಲೆಯಲ್ಲಿ ರಾಣಿ ಚನ್ನಮ್ಮ ಪಡೆ ವಾಹನವು ಹೆಚ್ಚಾಗಿ ಮಹಿಳೆಯರು ಓಡಾಡುವ ಜನನಿಬಿಡ ಸ್ಥಳಗಳಲ್ಲಿ ಹಾಗೂ ಶಾಲಾ ಕಾಲೇಜುಗಳ ಬಳಿ ಹೆಚ್ಚಿನ ಗಸ್ತು ಕಾರ್ಯವನ್ನು ನಿರ್ವಹಿಸುತ್ತಿರುತ್ತದೆ.
- ಮಹಿಳೆಯರು ಮತ್ತು ಹೆಣ್ಣು ಮಕ್ಕಳ ಮೇಲೆ ನಡೆಯುತ್ತಿರುವ ದೌರ್ಜನ್ಯಗಳನ್ನು ಹತ್ತಿಕ್ಕುವ ನಿಟ್ಟಿನಲ್ಲಿ ಬೆಂಗಳೂರು ನಗರದಲ್ಲಿ "ವೀರವನಿತೆ" ತಂಡವನ್ನು ರಚಿಸಿ, ಸದರಿಯವರಿಗೆ 6 ತಿಂಗಳು ನುರಿತ ತಜ್ಞರಲ್ಲಿ ಸ್ವಯಂರಕ್ಷಣೆ ಮತ್ತು ಮಾರ್ಷಿಯಲ್ ಆರ್ಟ್ಸ್ ಬಗ್ಗೆ ತರಬೇತಿ ನೀಡಿ, ನಂತರ ಸದರಿ ಯವರುಗಳನ್ನು 3 ತಂಡಗಳನ್ನಾಗಿ ರಚಿಸಿ ಮೇಲಾಧಿಕಾರಿಗಳ ನೇತೃತ್ವದಲ್ಲಿ ನಗರದ ವಿವಿಧ ಶಾಲಾ-ಕಾಲೇಜುಗಳು ಮತ್ತು ಮಹಿಳೆಯರು ಹೆಚ್ಚಾಗಿ ಕೆಲಸ ನಿರ್ವಹಿಸುವ ಗಾರ್ಮೆಂಟ್ಸ್‌ಗಳು, ಮಾಲ್ ಮತ್ತಿತರ ಕಡೆಗಳಲ್ಲಿ ಸದರಿಯವರುಗಳಿಗೆ ಸ್ವಯಂ ರಕ್ಷಣೆಯ ಬಗ್ಗೆ ಮಾಹಿತಿ ಹಾಗೂ ತರಬೇತಿಗಳನ್ನು ನೀಡಲಾಗಿರುತ್ತದೆ.
- ಬೆಂಗಳೂರು ನಗರದಲ್ಲಿ ಮಹಿಳೆಯರ ರಕ್ಷಣೆಗಾಗಿ ಸೇಫ್ ಸಿಟಿ ಪ್ರಾಜೆಕ್ಟ್‌ನ ಅಡಿಯಲ್ಲಿ 7500 ಸಿ.ಸಿ. ಟಿವಿ ಗಳನ್ನು ಅಳವಡಿಸಲಾಗಿದೆ ಹಾಗೂ ಅವರ ನೆರವಿಗಾಗಿ 24/7 ಸಮಯಕಾಲ ಸ್ಪಂದಿಸಲು 'ಕಮಾಂಡ್ ಸೆಂಟರ್' ಅನ್ನು ತೆರೆದಿದ್ದು, ಸದರಿ ಕಮಾಂಡ್ ಸೆಂಟರ್‌ನಲ್ಲಿ ನುರಿತ ತಾಂತ್ರಿಕ